# ಶೈವ ಸಂತ ತಿರುಜ್ಞಾನ ಸಂಬಂಧರು

❑ ಎನ್. ಗೋಪೀನಾಥ

**ಪವಾಡಸದೃಶ ಘಟನೆಗಳಿಂದ ತುಂಬಿಹೋಗಿರುವ ಶೈವಸಂತ ತಿರುಜ್ಞಾನ ಸಂಬಂಧರ ಕಿರುಪರಿಚಯವನ್ನು ನೀಡಿರುವ ಶ್ರೀ ಎನ್. ಗೋಪೀನಾಥ ಅವರು ಶಿವಮೊಗ್ಗ ನಿವಾಸಿಗಳು ಮತ್ತು ಆಶ್ರಮದ ಭಕ್ತರು.**

ಮುಖ್ಯವಾಗಿ ಜ್ಞಾನಮಾರ್ಗವನ್ನು ಬೋಧಿಸಿದ ಜ್ಞಾನ ಸಂಬಂಧರು ದಕ್ಷಿಣ ಭಾರತದ, ತಮಿಳುನಾಡಿನ ಶಿವಕಾಶಿಯಲ್ಲಿ ಬ್ರಾಹ್ಮಣ ಕುಟುಂಬದಲ್ಲಿ ಕ್ರಿ.ಶ. ಏಳನೆ ಶತಮಾನದ ಆದಿ ಭಾಗದಲ್ಲಿ ಜನಿಸಿದರು. ತಂದೆ ಶಿವಪಾದ ಹೃದಯ, ತಾಯಿ ಭಗವತಿ. ಅವರ ತಂದೆ, ಅವರಿಗೆ ಮೂರುವರುಷವಾಗಿದ್ದಾಗ, ಸಂಬಂಧರನ್ನು ದೇವಸ್ಥಾನದ ಕೊಳ ಒಂದಕ್ಕೆ ಕರೆದುಕೊಂಡು ಹೋಗಿದ್ದರು. ಮಗುವನ್ನು ಕೊಳದ ಮೆಟ್ಟಿಲಿನ ಮೇಲೆ ಬಿಟ್ಟು, ತಾವು ಸ್ನಾನಕ್ಕೆ ಇಳಿದರು. ಒಂಟಿಯಾದ ಮಗು ಅಳತೊಡಗಿತು. ಒಂದು ಐತಿಹ್ಯದ ಪ್ರಕಾರ, ಆಗ ದೇವಿಪಾರ್ವತಿ ಅಲ್ಲಿ ಕಾಣಿಸಿಕೊಂಡು, ತನ್ನ ಸ್ತನದ ಹಾಲನ್ನು ಒಂದು ಬಟ್ಟಲಿಗೆ ಇಳಿಸಿ ಮಗುವಿಗೆ ಕೊಟ್ಟಳು. ಸ್ನಾನದಿಂದ ಹಿಂದಿರುಗಿ ಬಂದ ತಂದೆ ಮಗುವಿನ ಬಾಯಿಗೆ ಹಾಲು ಮೆತ್ತಿಕೊಂಡಿರುವುದನ್ನು ಕಂಡು, ಯಾರು ಕೊಟ್ಟರೆಂದು ಕೇಳಿದಾಗ, ಮಗು ಅಂತರ್ಧಾನರಾಗುತ್ತಿದ್ದ ಶಿವ-ಪಾರ್ವತಿಯರನ್ನು ತೋರಿಸಿತು. ತಂದೆ ಕಣ್ಣುಜ್ಜಿಕೊಂಡು ನೋಡಿದರೂ, ಅವರಿಗೆ ದೇವದರ್ಶನವಾಗಲಿಲ್ಲ. ಆದರೆ ತಮ್ಮ ಮಗು ವಿಶೇಷ ದೈವೀಕೃಪೆಗೆ ಪಾತ್ರನಾದನೆಂದು ತಿಳಿದುಕೊಂಡು ಆ ಅದ್ಭುತ ಮಗುವನ್ನು ಭುಜದ ಮೇಲಿರಿಸಿಕೊಂಡು ಹತ್ತಿರದ ದೇವಸ್ಥಾನಕ್ಕೆ ಹೋದಾಗ, ಅದು ಪವಾಡಸದೃಶ ರೀತಿಯಲ್ಲಿ, ಸುರಿತ ಕವಿಯಂತೆ ದೇವಸ್ತುತಿಯನ್ನು ಮಾಡಿತು. ಜಗನ್ಮಾತೆ ಪಾರ್ವತಿಯ ನೇರ ದರ್ಶನದಿಂದ ಪಡೆದ ದೈವೀಜ್ಞಾನದಿಂದಾಗಿ, ಮಗು **ತಿರುಜ್ಞಾನ ಸಂಬಂಧರ್** ಎಂಬ ಹೆಸರು ಪಡೆಯಿತು.

ತಂದೆ ಈ ಮಗುವನ್ನು ಭುಜದ ಮೇಲಿರಿಸಿಕೊಂಡು ಹಲವಾರು ದೇವಸ್ಥಾನಗಳಿಗೆ ಹೋದಾಗ, ಮಗು ಅಲ್ಲೆಲ್ಲಾ ಭಗವಂತನನ್ನು ಕುರಿತು ಭಜನೆ ಮಾಡಿತು. ಈಗ ತೀರ್ಥಯಾತ್ರೆ ಪ್ರಾರಂಭಿಸಿದ ಅವರು ಮೊದಲು ಚಿದಂಬರಂನಲ್ಲಿ ನಟರಾಜನ ಆರಾಧಕರಾಗಿದ್ದ ಮೂರು ಸಾವಿರ ದೀಕ್ಷಿತರನ್ನು ದೇವಾಂಶಸಂಭೂತರೆಂದೇ ಗೌರವಿಸಿದರು. ತಿರುವುದವರೈ ದೇವಸ್ಥಾನಕ್ಕೆ ಹೋದಾಗ, ಅಲ್ಲಿನ ಜನರು, ಸ್ವಪ್ನದಲ್ಲಾದ ದೈವಾಜ್ಞೆಯಂತೆ, ಅವರಿಗೆ ಮುತ್ತುಗಳಿಂದ ಅಲಂಕೃತವಾದ ಪಲ್ಲಕ್ಕಿಯನ್ನು ಕಾಣಿಕೆಯಾಗಿ ನೀಡಿದರು. ಇಲ್ಲಿಂದ ಸಂಬಂಧರು ರಾಜಕುಮಾರನಂತೆ ಪ್ರಯಾಣ ಮಾಡಿದರು. ಹೋದಲ್ಲೆಲ್ಲಾ ಅವರಿಗೆ ಅಭೂತಪೂರ್ವ ಸ್ವಾಗತ ಸಿಕ್ಕಿತು. ಚಂದ್ರೇಶ್ವರ ನಯನಾರ್, ತಿರುಪ್ಪನಂದಾರ್, ತಿರುಕ್ಕುಚಾಂಬೈ ಮುಂತಾದ ಶೈವ ಸಂತರ ಜನ್ಮಸ್ಥಾನಗಳನ್ನು ಸಂದರ್ಶಿಸಿ ಊರಿಗೆ ಹಿಂತಿರುಗಿದರು.

ಎಂಟನೆ ವರ್ಷದಲ್ಲಿ ಅವರಿಗೆ ಉಪನಯನ ಮಾಡಲಾಯಿತು. ಅವರಿಗದು ಅವಶ್ಯವಾಗಿರಲಿಲ್ಲ. ಪೂರ್ಣಜ್ಞಾನ ಸಂಪನ್ನರಾಗಿ ಜನಿಸಿದ್ದ ಅವರಿಂದ ಗುರುಗಳೇ ಕಲಿತರು.

ತಿರುವಕ್ಕರಸು ನಯನಾರರ ಭೇಟಿಯು ಅವರ ಜೀವನದಲ್ಲೊಂದು ಸ್ಮರಣೀಯ ಘಟನೆ. ಸಂಬಂಧರರ ಬಗ್ಗೆ ಕೇಳಿದ ವೃದ್ಧ ತಿರುವಕ್ಕರಸರು ಶಿವಕಾಶಿಗೆ ತಮ್ಮನ್ನು ಭೇಟಿಮಾಡಲು ಬರುತ್ತಿರುವುದನ್ನು ತಿಳಿದ ಜ್ಞಾನ ಸಂಬಂಧರು ಭಕ್ತರೊಂದಿಗೆ ತಾವೇ ಧಾವಿಸಿ ಬಂದು, ಅಪರಿಮಿತ ಗೌರವ ಮತ್ತು ಪ್ರೀತಿ ತೋರಿಸಿ ಅವರನ್ನು "ಅಪ್ಪಾರ್" ಎಂದು ಸಂಬೋಧಿಸಿದರು. ಇಬ್ಬರೂ ಪರಸ್ಪರ ಅನುರಕ್ತಗೊಂಡು ಚಿರಪರಿಚಿತ ಗೆಳೆಯರಂತೆ, ಒಬ್ಬರನ್ನೊಬ್ಬರು ಆಲಿಂಗಿಸಿಕೊಂಡರು. ಜೊತೆಯಾಗಿ ಅನೇಕ ತೀರ್ಥಕ್ಷೇತ್ರಗಳಿಗೆ ಪ್ರಯಾಣ ಮಾಡಿದರು. ಆ ಸಂದರ್ಭದಲ್ಲಿ, ಸಂಬಂಧರು ತಿರುನೀಲಕಂಠ ನಯನಾರ್, ತಿರುಕೊಂಡ ನಯನಾರ್, ಕುಂಗಲಿಯಕ್ಕಲಾಯ ನಯನಾರ್ ಮತ್ತು ಮುರುಗ ನಯನಾರರನ್ನು ಭೇಟಿಯಾದರು.

ಪಾಂಡ್ಯರಾಜ್ಯದ ರಾಜಧಾನಿಯಾದ ಮಧುರೈಗೆ ನೀಡಿದ ಭೇಟಿ ಅವರ ಜೀವನದಲ್ಲಿನ ಪ್ರಮುಖ ಘಟನೆ. ಇಲ್ಲಿಯೇ ಅವರು ತಮ್ಮ ಜೀವನದ ಧ್ಯೇಯವಾದ ಶೈವ ಪಂಥದ ಪುನರುಜ್ಜೀವನವನ್ನು ಮಾಡಿದ್ದು. ಮಧುರೈನಲ್ಲಿ ಜೈನರು ಪ್ರಬಲರಾಗಿ ಪಾಂಡ್ಯರಾಜನನ್ನು ಮತ್ತು ಕೆಲವರನ್ನು ಜೈನಧರ್ಮಕ್ಕೆ ಮತಾಂತರಿಸಿದ್ದರು. ಆದರೆ ರಾಣಿ ಮಂಗಳ ನಾಯಕ್ಕರಸಿ ಮತ್ತು ಮುಖ್ಯಮಂತ್ರಿ ಶೈವಧರ್ಮದಲ್ಲಿಯೇ ಇದ್ದುಕೊಂಡು, ರಾಜನ ಪುನಃ ಮತಾಂತರಕ್ಕಾಗಿ ಹಂಬಲಿಸುತ್ತಿದ್ದರು. ಸಂಬಂಧರ ಬಗ್ಗೆ ಕೇಳಿದ ಅವರು ದೂತರನ್ನು ಕಳಿಸಿ, ವೇದನಾರಾಯಣದಲ್ಲಿ ಅಪ್ಪಾರರ ಜೊತೆಗಿದ್ದ ಅವರನ್ನು ಮಧುರೈಗೆ ಬರಲು ಪ್ರಾರ್ಥಿಸಿದರು. ಅಪ್ಪಾರರ ಪ್ರೀತಿಪೂರ್ವಕವಾದ ನಿಷೇಧವನ್ನು ಮನ್ನಿಸದೆ, ಸರ್ವಮಂಗಳಕರವಾದ ಶಿವನ ಅನುಗ್ರಹದಿಂದ ಎಲ್ಲವೂ ಮಂಗಳಕರವಾಗುವುದೆಂದು ಅವರಿಗೆ ಸಮಾಧಾನ ಹೇಳಿ, ಸಂಬಂಧರು ಮಧುರೈಗೆ ಬಂದರು.

ಅಲ್ಲಿಯ ಮುಖ್ಯಮಂತ್ರಿ ಅವರನ್ನು ಸ್ವಾಗತಿಸಿ, ದೇವಸ್ಥಾನದಲ್ಲಿ ಕಾಯುತ್ತಿದ್ದ ರಾಣಿಯ ಬಳಿಗೆ ಅವರನ್ನು ಕರೆದುಕೊಂಡು ಹೋದರು. ಆಗ ರಾಜನು ತೀವ್ರವಾದ ಬೇನೆಯಿಂದ ನರಳುತ್ತಿದ್ದನು. ಸುರಿತ ವೈದ್ಯರೆಲ್ಲಾ ಚಿಕಿತ್ಸೆ ಮಾಡಿ ನಿರಾಶರಾಗಿದ್ದರು. ಜೈನ ಸಂನ್ಯಾಸಿಗಳೂ ಕೂಡ, ಔಷಧಿ, ತಂತ್ರ ಮಂತ್ರಗಳಿಂದ ಬೇನೆ ಪರಿಹಾರ ಮಾಡಲು ಸರ್ವಪ್ರಯತ್ನ ಮಾಡಿ ಸೋತಿದ್ದರು. ರಾಣಿ ರಾಜನ ಬೇನೆಯನ್ನು ಪರಿಹರಿಸಿ ಆಶೀರ್ವದಿಸುವಂತೆ ಸಂತರನ್ನು ಕೇಳಿಕೊಂಡಳು. ಸಂಬಂಧರು ದೈವಕೃಪೆಗಾಗಿ

ಪ್ರಾರ್ಥಿಸಿ, ರಾಜನ ಬಳಿ ಹೋಗಿ, ಪವಿತ್ರ ಭಸ್ಮವನ್ನು ಅವನ ದೇಹಕ್ಕೆ ಬಳಿದರು. ಪವಾಡ ಸದೃಶರೀತಿಯಲ್ಲಿ ಆತನು ಬೇನೆಯಿಂದ ಮುಕ್ತನಾದನು. ಇದನ್ನು ನೋಡಿ ಹತಾಶರಾದ ಜೈನರು, ರಾಜನು ಜೈನಮತ ತ್ಯಜಿಸಬಹುದೆಂದು ಹೆದರಿ ತಮ್ಮ ಜೊತೆ ಆಧ್ಯಾತ್ಮಿಕ ಪರೀಕ್ಷೆಗೆ ನಿಂತು ಗೆಲ್ಲಬೇಕೆಂದು ಸಂಬಂಧರಿಗೆ ಸವಾಲೆಸೆದರು.

ಮೊದಲನೆಯದೇ ಅಗ್ನಿ ಪರೀಕ್ಷೆ! ಸಂಬಂಧರು ಒಂದು ತಾಳೆಗರಿಯನ್ನು ತೆಗೆದುಕೊಂಡು ಅದರ ಮೇಲೆ ತಮ್ಮದೊಂದು ಸ್ತೋತ್ರವನ್ನು ಬರೆದು ಅದನ್ನು ಉರಿಯುತ್ತಿರುವ ಬೆಂಕಿಗೆ ಹಾಕಿದರು. ಜೈನಮುನಿಗಳೂ ಅದೇ ರೀತಿ, ತಮ್ಮ ಶಾಸ್ತ್ರವಾಕ್ಯ ಬರೆದು ಬೆಂಕಿಯಲ್ಲಿಟ್ಟರು. ಸಂಬಂಧರ ತಾಳೆಗರಿ ಬೆಂಕಿ ತಾಗಿಸಿಕೊಳ್ಳದೆ ಯಥಾಸ್ಥಿತಿ ಇರಲು ಜೈನರ ಗರಿ ಸುಟ್ಟು ಭಸ್ಮವಾಯಿತು. ನಂತರ ಇನ್ನೊಂದು ಕ್ಲಿಷ್ಟ ಪರೀಕ್ಷೆ ಮಾಡಲಾಯಿತು. ಅದೆಂತಹುದೆಂದರೆ ತಮ್ಮ ನಿಜತತ್ತ್ವವನ್ನು ಬರೆದ ಪರಸ್ಪರರ ತಾಳೆಗರಿ, ವೈಗೈ ನದಿಯಲ್ಲಿ ಪ್ರವಾಹವನ್ನೆದುರಿಸಿ ಮುಂದ ಸಾಗಬೇಕು! ಜೈನರು ಎಸೆದ ತಾಳೆಗರಿ ಪ್ರವಾಹವನ್ನು ಎದುರಿಸಲಾರದೆ ಹಿಂದಕ್ಕೆ ಬಂದರೆ, ಸಂಬಂಧರದು ಮುಂದೆ ಹೋಗಿ, ಅವರು ನಿಲ್ಲಲು ಹೇಳಿದ ನಂತರ ಅಲ್ಲೇ ನಿಂತು ಅವರ ಕೈವಶವಾಯಿತು. ಈ ರೀತಿ ಶೈವಧರ್ಮದ ವಿಜಯ ಸಂಪೂರ್ಣವಾಯಿತು. ರಾಜನು ಮತ್ತು ಅವನ ಎಲ್ಲ ಪ್ರಜೆಗಳು ಶೈವಧರ್ಮಕ್ಕೆ ಮರಳಿ ಬಂದರು.



ಪಲ್ಲಕ್ಕಿಯಲ್ಲಿ ತಿರುಜ್ಞಾನ ಸಂಬಂಧರು

ತಮ್ಮ ಮಗನ ದಿಗ್ವಿಜಯ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಸಂಬಂಧರ ತಂದೆ ಈ ಹಿಂದೆಯೇ ಮಧುರೈಗೆ ಬಂದಿದ್ದರು. ಮಧುರೈನಿಂದ ಹೊರಟ ಸಂಬಂಧರು ತಂದೆಯ ಜೊತೆ ರಾಮೇಶ್ವರದ ತನಕ ಪ್ರಯಾಣ ಮಾಡಿದರು. ಹಿಂದಿರುಗುವ ದಾರಿಯಲ್ಲಿ ತಿರುಕ್ಕರವರೆಗೆ ಬಂದು ಅಪ್ಪಾರರು ಎಲ್ಲಿರುವರೆಂದು ವಿಚಾರಿಸಿದಾಗ, ತಿರುಪ್ಪೂಂತುರ್ತಿಯಲ್ಲಿರುವರೆಂದು ತಿಳಿಯಲು, ಅಲ್ಲಿಗೆ ಹೊರಟರು. ಈ ಸುದ್ದಿ ತಿಳಿದ ಅಪ್ಪಾರರು, ಕೆಲವು ಭಕ್ತರಿಂದೊಡಗೂಡಿ, ಅವರನ್ನು ಸ್ವಾಗತಿಸಲು ತಾವೇ ಬಂದರು. ಪಲ್ಲಕ್ಕಿಯಲ್ಲಿ ಬರುತ್ತಿದ್ದ ಸಂಬಂಧರನ್ನು ಕಂಡು ಅವರಿಗರಿವಾಗದಂತೆ ಪಲ್ಲಕ್ಕಿಗೆ ಹೆಗಲು ಕೊಟ್ಟರು! ಇದನ್ನರಿಯದ ಸಂಬಂಧರು ಗ್ರಾಮ ತಲುಪಿದಾಗ, "ಅಪ್ಪಾರರೆಲ್ಲಿ?" ಎಂದು ಕೇಳಿದರು. ಕೆಳಗಿನಿಂದ ಧ್ವನಿ ಕೇಳಿಸಿತು : "ಇಲ್ಲಿದ್ದೇನೆ ಸ್ವಾಮಿ! ನಿಮ್ಮ ಪಲ್ಲಕ್ಕಿ ಹೊರುವ ಭಾಗ್ಯ ನನ್ನದಾಗಿದೆ!" ಅವಾಕ್ಕಾದ ಸಂಬಂಧರು ತಕ್ಷಣ ಪಲ್ಲಕ್ಕಿಯಿಂದಿಳಿದು ಆ ವೃದ್ಧ ಸಂತರ ಪಾದಕ್ಕೆರಗಿ, "ತಾವು ಈ ರೀತಿ ಮಾಡಿರುವುದು ಉಚಿತವೆ?" ಎಂದು ಪ್ರಶ್ನಿಸಿದರು. ಅಪ್ಪಾರರು ಮರುನಮಸ್ಕರಿಸಿ, ಮಧುರೈ ದಿಗ್ವಿಜಯದ ಬಗ್ಗೆ ಅಪಾರ ಸಂತಸ ವ್ಯಕ್ತಪಡಿಸಿದರು. ವೇದನಾರಾಯಣದಲ್ಲಿ ಅವರಿಂದ ಬೀಳ್ಕೊಂಡ ನಂತರ ನಡೆದ ಎಲ್ಲಾ ಘಟನೆಗಳನ್ನು ಸಂಬಂಧರು ಅತ್ಯಾನಂದದಿಂದ ಅಪ್ಪಾರರಿಗೆ ತಿಳಿಸಿದರು. ಅವರ ಜೀವನಚರಿತ್ರಕಾರರು ಈ ಭೇಟಿಯನ್ನು ಪ್ರೀತಿ ಮತ್ತು ಕೃಪೆಯೆಂಬ ಸಾಗರಗಳ ಸಂಗಮವೆಂದು ವರ್ಣಿಸಿರುತ್ತಾರೆ.

ನಂತರ ಸಂಬಂಧರು ಶಿವಕಾಶಿಗೆ ಹಿಂದಿರುಗಿದರು. ಅಲ್ಲಿ ಬಹಳ ಕಾಲ ನಿಲ್ಲದೆ ಮತ್ತೆ ಪ್ರಯಾಣ ಹೊರಟು ತಿರುವಣ್ಣಾಮಲೈ, ಕಾಳಹಸ್ತಿ, ತಿರುವಲಂಗಾಡು, ತಿರುವಾಯೂರು, ಮತ್ತಿತರ ಸ್ಥಳಗಳಲ್ಲಿ ಸಂಚರಿಸಿ, ಮೈಲಾಪುರಕ್ಕೆ ಬಂದರು. ನಂತರ ತಿರುವಣಿಯೂರು, ತಿರುಕ್ಕಲುಕುರಣಂ ಮುಖಾಂತರ ಚಿದಂಬರಂಗೆ ಪ್ರವೇಶ ಮಾಡಿದರು. ಅಲ್ಲಿ ಅವರಿಗಾಗಿ ಕಾಯುತ್ತಿದ್ದ ಅವರ ತಂದೆ, ಅವರನ್ನು ಶಿವಕಾಶಿಗೆ ಕರೆದುಕೊಂಡು ಹೋದರು. ಮದುವೆಯೆಂಬುದು ಒಂದು ವೈದಿಕ ಧರ್ಮದ ಕಾರ್ಯವೆಂದೂ ಧಾರ್ಮಿಕ ನಾಯಕನು ಹೊಂದಲೇ ಬೇಕಾದ ಸಂಸ್ಕಾರವೆಂದೂ ವಾದಿಸಿ, ಸಂಬಂಧರು ಮದುವೆಯಾಗಬೇಕೆಂದು ಒತ್ತಾಯಿಸಿದರು. ಸಂಬಂಧರು ಮೊದಲು ಹಿಂಜರಿದರಾದರೂ, ಕೊನೆಗೆ ಒಪ್ಪಿಕೊಂಡರು. ನಂಬಿಯಂದಾರ್ ನಂಬಿಯವರ ಮಗಳೊಂದಿಗೆ, ಹೆಣ್ಣಿನ ಮನೆಯಲ್ಲಿ ವಿವಾಹ ನಡೆಯಿತು. ನಂತರ ಎಲ್ಲರೂ ಸ್ಥಳೀಯ ಶಿವ ದೇವಸ್ಥಾನಕ್ಕೆ ಹೋದರು. ಪೂಜೆ ಮುಗಿದ ನಂತರ ಸಂಬಂಧರು ಶಿವನನ್ನು ಪ್ರಾರ್ಥಿಸಿದರು: "ಓ ದೇವಾ! ನನ್ನ ಕಾರ್ಯ ಮುಗಿಯಿತು. ನಿನ್ನ ಪಾದಕಮಲಗಳನ್ನು ಸೇರುವ ಕಾಲ ಬಂದಿದೆ!" ದಿವ್ಯಜ್ಯೋತಿಯೊಂದು, ಶಿವಲಿಂಗದಿಂದ ಹೊರಟು ಆಲಯವನ್ನೆಲ್ಲಾ

ವ್ಯಾಪಿಸಿತು. ಸಂಬಂಧರು ತಮ್ಮ ವಧುವಿನೊಡನೆ, ಅದರತ್ತ ನಡೆದು ಅದೃಶ್ಯರಾದರು! ಗುಂಪಿನಲ್ಲಿದ್ದ ಕೆಲವು ಜ್ಞಾನಸಿದ್ಧರು, ಸಂಬಂಧರನ್ನು ಅನುಸರಿಸಿ, ತಾವೂ ಆ ಪ್ರಕಾಶಮಾನವಾದ ಜ್ಯೋತಿಯಲ್ಲಿ ಒಂದಾಗಿ ಹೋದರು!

ಈಗ ಲಭ್ಯವಿರುವ, ನಂಬಿಯಂದಾರ್ ನಂಬಿಯವರಿಂದ ಸಂಗ್ರಹಿಸಲ್ಪಟ್ಟ, ಶೈವಸಿದ್ಧಾಂತದ ಅಧಿಕೃತ ಕೃತಿ "ತಿರುಮರೈ" ಹನ್ನೆರಡು ಭಾಗಗಳಲ್ಲಿದೆ. ೩೮೩ ದಶಕಗಳಿರುವ ತಿರುಜ್ಞಾನ ಸಂಬಂಧರರ ಸ್ತೋತ್ರಗಳು ಮೊದಲನೆಯ ಮೂರು ಭಾಗದಲ್ಲಿವೆ. ಸಂಬಂಧರು ದೇವರನ್ನು ಸ್ತುತಿಸುತ್ತಾರೆ—ಉದ್ಧರಿಸಲು ಬೇಡುವ ಪಶ್ಚಾತ್ತಾಪಿಯಂತಲ್ಲ; ಪಾಪಿಯಂತಲ್ಲ. ಆದರೆ ಭಗವಂತನ ನಿಜವಾದ ಮಗನೆಂಬ ಪ್ರೇಮದಿಂದ ಮತ್ತು ವಿಶೇಷಾಧಿಕಾರದಿಂದ!

* * *

ಸ್ವಾಮಿ ವಿವೇಕಾನಂದರು ೧೮೯೭ರ ಅಂತ್ಯಭಾಗದಲ್ಲಿ ತಮ್ಮ ಭಾರತ ಪರ್ಯಟನೆಯ ಕೊನೆಯ ಹಂತದಲ್ಲಿ, ಮದರಾಸಿಗೆ (ಈಗಿನ ಚೆನ್ನೈ) ಬಂದಾಗ, ಅವರನ್ನು ಭೇಟಿ ಮಾಡಿದವರೆಲ್ಲರೂ, ಅವರ ಅಲ್ಪವಯಸ್ಸು (೩೦ ವರ್ಷಗಳು), ಋಷಿಸದೃಶ ಅಪಾರ ಜ್ಞಾನ, ತೇಜೋವಂತ ವ್ಯಕ್ತಿತ್ವ, ಪರಿಶುದ್ಧ ಚಾರಿತ್ರ್ಯ, ದೀನ ದಲಿತರ ಏಳಿಗೆಗಾಗಿ ಅವರಿಗಿದ್ದ ಅಪಾರ ಕಾಳಜಿ—ಇವುಗಳನ್ನು ಕಂಡು ನಿಬ್ಬೆರಗಾದರು. ಪರಿಚಯ ನಿಕಟವಾದಂತೆ, ಇವರು ಸಾಮಾನ್ಯ ಪುರುಷರಲ್ಲವೆಂದೂ ದೇವಾಂಶ ಸಂಭೂತರಿರಬೇಕೆಂದೂ ಎನ್ನಿಸಿತು. ಹಾಗಾದರೆ ಯಾರಿರಬಹುದು? ಸಹಜವಾಗಿಯೇ ಅಲ್ಪ ವಯಸ್ಸಿನಲ್ಲಿಯೇ ಅಪಾರ ಕಾರ್ಯವೆಸಗಿದ ತಮ್ಮ ನಾಡಿನ ಶೈವ ಸಂತ ತಿರುಜ್ಞಾನ ಸಂಬಂಧರಲ್ಲಿ ಹೋಲಿಕೆ ಕಂಡರು! ನಂತರ ಸ್ವಾಮೀಜಿ, ೧೮೯೩ರ ಮೇ ತಿಂಗಳಲ್ಲಿ ಅಮೆರಿಕದ ಚಿಕಾಗೋಗೆ ತೆರಳಿ, ಅಲ್ಲಿ ನಡೆದ ಸರ್ವಧರ್ಮಸಮ್ಮೇಳನದಲ್ಲಿ ಹಿಂದೂಧರ್ಮವನ್ನು ಪ್ರತಿನಿಧಿಸಿ ಅಪೂರ್ವ ಜಯಭೇರಿ ಸಾಧಿಸಿ, ಅಲ್ಲಿಯೇ ಸುಮಾರು ನಾಲ್ಕು ವರ್ಷಗಳ ಕಾಲ ನೆಲೆಸಿ, ಅಮೆರಿಕ ಮತ್ತು ಇಂಗ್ಲೆಂಡ್‌ಗಳಲ್ಲಿ ತಮ್ಮ ಸಚ್ಚಾರಿತ್ರ್ಯ ಹಾಗೂ ಉಪನ್ಯಾಸಗಳ ಮೂಲಕ ಹಿಂದೂಧರ್ಮದ ಸರ್ವಧರ್ಮಸಮನ್ವಯ ಭಾವವನ್ನೂ ಹಾಗೂ ವೇದಾಂತದ ಉದಾರ ತತ್ತ್ವವನ್ನೂ ವಿವರಿಸಲಾರಂಭಿಸಿದರು. ಈ ಸುದ್ದಿ ಭರತಖಂಡಕ್ಕೂ ತಲುಪಿ, ದೇಶದ ಜನ, ತಮಸ್ಸಿನಿಂದ ಎಚ್ಚೆತ್ತು ಕೊಂಡರು! ಈಗ ತಮಿಳುನಾಡಿನ ಜನಸಾಮಾನ್ಯರೂ ಕೂಡ ಸ್ವಾಮೀಜಿ ಜ್ಞಾನಸಂಬಂಧರ ಅಪರಾವತಾರವೆಂದೇ ಪರಿಗಣಿಸತೊಡಗಿದರು!

ನಂತರ ಸ್ವಾಮೀಜಿ ಪಾಶ್ಚಾತ್ಯ ದೇಶಗಳಲ್ಲಿ ವೇದಾಂತದ ಹಿರಿಮೆಯನ್ನು ಸಾರಿ ಮರಳಿ ಭಾರತಕ್ಕೆ ಹಿಂದಿರುಗಿದಾಗ ಮದರಾಸಿನಲ್ಲಿ ಅಭೂತಪೂರ್ವ ಸ್ವಾಗತ ಲಭಿಸಿತು. ರೈಲು ನಿಲ್ದಾಣದಿಂದ ಅವರನ್ನು ಮೆರವಣಿಗೆಯಲ್ಲಿ ಕರೆದುಕೊಂಡು ಹೋಗಲಾಯಿತು. ಕೇಸರಿ ನಿಲುವಂಗಿ, ರುಮಾಲು ಧರಿಸಿದ್ದ ಸ್ವಾಮೀಜಿ ತೇಜೋಮಯವಾಗಿ ವಿರಾಜಿಸುತ್ತಿದ್ದರು. ಎಲ್ಲೆಲ್ಲೂ ಜನವೋ ಜನ! ಉತ್ಸವಮೂರ್ತಿಯನ್ನು ಬರಮಾಡಿಕೊಳ್ಳುವಂತೆ, ಧೂಪ, ದೀಪ, ಫಲ ಪುಷ್ಪಗಳನ್ನು ಸಮರ್ಪಿಸಲಾಯಿತು. ಆಗ ಇದ್ದಕ್ಕಿದ್ದಂತೆ, ಕುಲೀನ ಮಹಿಳೆಯೊಬ್ಬಳು ಜನರನ್ನು ತಳ್ಳಿಕೊಂಡು ಎದುರು ಬಂದು, ಸ್ವಾಮೀಜಿಯವರನ್ನು ಕಣ್ತುಂಬ ನೋಡಿ ಅತ್ಯಂತ ಭಕ್ತಿಭಾವದಿಂದ—ಅವರು ತಿರುಜ್ಞಾನ ಸಂಬಂಧರ ಅವತಾರವೆಂದೇ ನಂಬಿಕೆಯಿಂದ—ನಮಸ್ಕರಿಸಿದಳು!

◆

ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ವತಿಯಿಂದ 'ಜ್ಞಾನವಾಹಿನಿ' ಎಂಬ ಸಂಚಾರಿ ಜ್ಞಾನಪ್ರಸಾರ ಅಭಿಯಾನ ಹಳ್ಳಿ ಪ್ರದೇಶಗಳಲ್ಲಿ ನಡೆಯುತ್ತಿದೆ. ಆ ಸಂದರ್ಭದಲ್ಲಿ ನಮ್ಮ ಪುಸ್ತಕಮಾರಾಟ ಮಳಿಗೆಯಲ್ಲಿ ನಡೆದ ಎರಡು ಹೃದಯಸ್ಪರ್ಶಿ ಘಟನೆಗಳಿವು.

'ಎರಡು ರೂಪಾಯಿ ಪುಸ್ತಕ ಕೊಡ್ರಿ' ಒಂದೇ ಕಣ್ಣಿನ ಹರಕಲು ಷರ್ಟಿನ ಹುಡುಗ ದುಡ್ಡು ಕೊಟ್ಟು ಪುಸ್ತಕ ತೆಗೆದುಕೊಂಡ. ಆದಾದ ಮೇಲೂ ಆ ಹುಡುಗ ಜಾಗ ಬಿಡಲಿಲ್ಲ. 'ಈ ಭಜನೆ ಪುಸ್ತಕ ಎಷ್ಟು ಆಗ್ತೈತ್ರೀ ?' ಕೆಂಪು ಕವರಿನ ಆ ಪುಸ್ತಕವನ್ನು ಆಸೆಯಿಂದ ಕೈಯಿಂದ ಸವರುತ್ತ ಮತ್ತೆ ಕೇಳಿದ. 'ಹದಿನೈದು ರೂಪಾಯಿ ಆಗುತ್ತೆ ' ಎಂದ ಪುಸ್ತಕ ಮಾರುವವನು. ಕ್ಷಣದಲ್ಲಿ ಮಾಯವಾದ ಹುಡುಗ. ವಾಪಸ್ಸು ಬಂದವನು ' ಸರ್, ಪುಸ್ತಕ ಕೊಡ್ರಿ, ಹಣ ತಂದಿದೀನಿ ' ಎಂದು ರೂಪಾಯಿ ಚಾಚಿದ. ವ್ಯವಹಾರ ಮುಗಿದರೂ ಹುಡುಗ ಜಾಗ ಬಿಡುತ್ತಲೇ ಇಲ್ಲ. ಆಸೆಯ ಕಣ್ಣುಗಳಿಂದ ಮತ್ತೆ ಮತ್ತೆ ಪುಸ್ತಕಗಳನ್ನು ನೋಡುತ್ತಲೇ ಇದ್ದ. 'ಸರ್, ಇನ್ನೊಂದು ಪುಸ್ತಕ ಕೊಡ್ರಿ, ಎರಡು ರೂಪಾಯಿ ಇದೆ.' ಎಂದು ಇನ್ನೊಂದು ಪುಸ್ತಕ ಕೊಂಡುಕೊಂಡ. ಹೀಗೆ ಅಂದು ಅವನ ಹತ್ತಿರ ಇದ್ದ ಕಡೆಯ ಪೈಸೆಯೂ ಪುಸ್ತಕ ಕೊಳ್ಳುವುದರಲ್ಲೇ ಖಾಲಿಯಾಯಿತು. ಆದರೆ ಎಷ್ಟೊಂದು ಸಂತೃಪ್ತಿಯ ಭಾವನೆ ಅವನ ಮುಖದಲ್ಲಿ! ಇದು ನಡೆದಿದ್ದು ದಾವಣಗೆರೆ ಜಿಲ್ಲೆಯ ಅನಗೋಡು ಎಂಬ ಚಿಕ್ಕ ಹಳ್ಳಿಯಲ್ಲಿ.

' ಒಂದು ಬುಕ್ಕು ಕೊಡಿ ಸರ್ ' ಕೊಳಕು ಕೊಳಕಾಗಿ ಬಟ್ಟೆ ಉಟ್ಟಿದ್ದ ಏಳು ವರ್ಷದ ಹುಡುಗ ಹಲ್ಲು ಕಿರಿಯುತ್ತ ಕೇಳಿದ. ' ಇದು ಪುಕ್ಕಟೆ ಅಲ್ಲ, ಐವತ್ತು ಪೈಸೆ ಆಗುತ್ತೆ. ' ಎಂದರು ಸ್ವಾಮಿಗಳು. 'ನನ್ನ ಹತ್ತಿರ ಒಂದು ರೂಪಾಯಿ ಇದೆ. ' ಎಂದು ತನ್ನ ಪಾಕೇಟಿನಿಂದ ನಾಣ್ಯವನ್ನು ತೆಗೆದು ತೋರಿಸಿದ ಹುಡುಗ. 'ಸರಿ, ಸರಿ, ನಿನಗೆ ಓದಕ್ಕೆ ಬರುತ್ತೇನೋ? ' ಎಂದು ಕೇಳಿದರು ಸ್ವಾಮಿಗಳು. ' ನನಗೆ ಓದೋಕೆ ಬರಲ್ರಿ, ನನ್ನ ತಮ್ಮ ಓದುತ್ತಾನ್ರೀ, ಅವನು ನನಗೆ ಓದಿ ಹೇಳ್ತಾನ್ರೀ' ಎಂದ ಹುಡುಗ. ಸ್ವಾಮಿಗಳ ಕಣ್ಣು ಮೆಚ್ಚುಗೆಯಿಂದ ತೇವವಾಯಿತು. ಆ ಹುಡುಗ ವಿವೇಕಾನಂದರ ವಿಗ್ರಹ ನೋಡಿದ್ದ. ಅವರ ಬಗ್ಗೆ ಹೆಚ್ಚು ತಿಳಿಯಬೇಕು ಎನ್ನುವ ತವಕ ಅವನಿಗೆ. ಈ ಘಟನೆ ನಡೆದಿದ್ದು ಗದಗ ಜಿಲ್ಲೆಯ ಡಂಬಳ ಎಂಬಲ್ಲಿ. ✳